

# ಕಿಶೋರಿ ತಾಯಿ ಇನ್ನು ನೆನಪು ಮಾತ್ರ..

ಬಹು ಘರಾಣೆಗಳಲ್ಲಿ ಪ್ರಭುತ್ವ ಸಾಧಿಸಿ ಜೀವನದುದ್ದಕ್ಕೂ 'ಗಾನ ಯಾನ' ನಡೆಸಿ ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದ ಗಾಯಕಿ ಕಿಶೋರಿ ಅಮೋಣಕರ್ ಗಾನ ನಿಲ್ಲಿಸಿದ್ದಾರೆ. ಸಂಗೀತದ ಜತೆಗೆ ಭಾವ, ರಸಗಳಿಗೂ ಮಹತ್ವ ನೀಡಿ, ಹೊಸ ಸಾಧ್ಯತೆಗಳ ಬಗ್ಗೆ ಸದಾ ಜಾಗೃತರಾಗಿರುತ್ತಿದ್ದ ಕಿಶೋರಿ ತಾಯಿ ಇನ್ನು ನೆನಪು ಮಾತ್ರ.

■ **ಉಮಾ ಅನಂತ್**



ಪಂ. ಶಿವಕುಮಾರ್ ಶರ್ಮ ಅವರೊಂದಿಗೆ ಕಿಶೋರಿ ಅಮೋಣಕರ್

ಅದು ಔಡವ ಸ್ವರಸಮೂಹ ಹೊಂದಿದ ಭೂಪಾಲಿ ರಾಗವೇ ಇರಲಿ, ಮಳೆ ರಾಗ ಮಲ್ಹಾರ್ ಆಗಿರಲಿ, ಸಂಜೆಯ ಸುಮಧುರ ಭಕ್ತಿ ಪ್ರಧಾನ ರಾಗ ಯಮನ್ ಇರಲಿ.. ಮಹಾನ್ ಗಾಯಕಿ ಕಿಶೋರಿ ಅಮೋಣಕರ್ ದನಿಯಲ್ಲಿ ಆಲಾಪ ಆಗತೊಡಗಿತೆಂದರೆ ಅಲ್ಲಿ ಸೃಜನಶೀಲತೆ, ಮಾಧುರ್ಯ, ರಸಾಸ್ವಾದ, ಭಾವ, ಲಯಬದ್ಧತೆ ಎಲ್ಲವೂ ಸೇರಿ ಅದ್ಭುತ ರಸಪಾಕ ಸೃಷ್ಟಿಯಾಗುತ್ತಿತ್ತು. ಅವರ ಸಂಗೀತದ ನಾದ ಮಾಧುರ್ಯಕ್ಕೆ ಕೇಳುಗರು ಮಾರು ಹೋಗುತ್ತಿದ್ದರು. ಕಿಶೋರಿ ತಾಯಿ ಸಂಗೀತದ ರಾಗ– ಭಾವಕ್ಕೆ ನಾದದ ಪೋಷಾಕು ತೊಡಿಸುತ್ತಿದ್ದರು. ಇದು 'ಹಾಲಿನಲ್ಲಿ ಸಕ್ಕರೆ ಕರಗಿದಂತಹ' ಅನುಭವವನ್ನು ಕೇಳುಗರಿಗೆ ನೀಡುತ್ತಿತ್ತು. ಇದೇ ಕಿಶೋರಿ ಅಮೋಣಕರ ಅವರ ಗಾಯನ ವೈಶಿಷ್ಟ್ಯ.

ಜೈಪುರ ಘರಾಣೆಯಲ್ಲಿ ಅಸಾಧಾರಣ ಪ್ರಭುತ್ವ ಸಾಧಿಸಿದ್ದ ಈ ಗಾಯಕಿ, ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಢಿಸಿಕೊಂಡಿದ್ದವರು. ಹಿಂದೂಸ್ತಾನಿ ಸಂಗೀತದ ಖಯಾಲ್ ಗಾಯನ, ಠುಮ್ರಿ ಮತ್ತು ಭಜನ್‌ಗಳಿಗೆ ಮಧುರಾತಿ ಮಧುರ ಸ್ವರ ಸಂಯೋಜಿಸಿ ಹಾಡುತ್ತಿದ್ದ ಪರಿ ಅದ್ಭುತ. ತಾಯಿ ಮೋಗುಬಾಯಿ ಕುರ್ಡೀಕರ್ ಇವರ ಮೊದಲ ಗುರು. ಹಲವಾರು ಕಛೇರಿಗಳಲ್ಲಿ ತಾಯಿಯ ಮಗ್ಗುಲಲ್ಲೇ ಕುಳಿತು ತಂಬೂರಿ ಮೀಟುತ್ತಿದ್ದ

> **ಕಿಶೋರಿ ಅವರ ಶಾರೀರದಲ್ಲಿ ಹೊಮ್ಮುವ 'ರಾಗ ಭೂಪಾಲಿ' ಅದು ಬರೀ ರಾಗವಲ್ಲ. ಅದ್ಭುತ ರಸಧಾರೆ.**
> **–ತಬಲಾ ಮಾಂತ್ರಿಕ ಉಸ್ತಾದ್ ಜಾಕೀರ್ ಹುಸೇನ್**

